**HASSAN INSTITUTE OF MEDICAL SCIENCES, HASSAN**
**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.**
**(An Autonomous Medical Institution, Government of Karnataka )**
**SRI CHAMARAJENDRA HOSPITAL CAMPUS, HASSAN-573201**
**Website: www.hims-hassan.org, Phone/Fax No.08172-231699/ 231599**

# 13ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು

ದಿನಾಂಕ: 19-08-2012ನೇ ಭಾನುವಾರ,

ಅಪರಾಹ್ನ: 2:00ಗಂಟೆಗೆ

::ಸ್ಥಳ: :

ನಿರ್ದೇಶಕರ ಕಛೇರಿ, ಕೊಠಡಿ ಸಂಖ್ಯೆ:27, ನೆಲಮಹಡಿ,

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ-573 201.

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599

## 13ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ:19-08-2012 ರಂದು ಭಾನುವಾರ ಅಪರಾಹ್ನ 12-00 ಗಂಟೆಗೆ ನಿರ್ದೇಶಕರ ಕೊಠಡಿ ಸಂಖ್ಯೆ: 27, ನೆಲಮಹಡಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿ ನಡೆದ 13ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.

**ಆಡಳಿತ ಮಂಡಳಿ ಸದಸ್ಯರ ಸಂಖ್ಯೆ:16** **ಹಾಜರಿದ್ದ ಸದಸ್ಯರ ಸಂಖ್ಯೆ:10**

### ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು

| | | |
|---|---|---|
| 01 | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು | ಅಧ್ಯಕ್ಷರು |
| 02 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಉಪಾಧ್ಯಕ್ಷರು |
| 03 | ಮಾನ್ಯ ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ, ಬೆಂಗಳೂರು. | ಗೈರು ಹಾಜರು |
| 04 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಗೈರು ಹಾಜರು |
| 05 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು. | ಗೈರು ಹಾಜರು |
| 06 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಇಲಾಖೆ, ಬೆಂಗಳೂರು. | ಗೈರು ಹಾಜರು |
| 07 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು |
| 08 | ಸರ್ಕಾರದ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,(ವೈದ್ಯಕೀಯ ಶಿಕ್ಷಣ),ವಿಕಾಸ ಸೌಧ, ಬೆಂಗಳೂರು. | ಸದಸ್ಯರು |
| 09 | ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು. | ಗೈರು ಹಾಜರು |
| 10 | ಮುಖ್ಯ ಅಭಿಯಂತರರು, C & B, ಬೆಂಗಳೂರು. | ಗೈರು ಹಾಜರು |
| 11 | ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ. | ಸದಸ್ಯರು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| 12 | ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ. | ಸದಸ್ಯರು |
| 13 | ವೈದ್ಯಕೀಯ ಅಧೀಕ್ಷಕರು, ಹಿಮ್ಸ್ ಆಸ್ಪತ್ರೆ, ಹಾಸನ. | ಸದಸ್ಯರು |
| 14 | ಮುಖ್ಯ ಆಡಳಿತಾಧಿಕಾರಿಗಳು (ಪ್ರಭಾರ), ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು |
| 15 | ಆರ್ಥಿಕ ಅಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು |
| 16 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ |

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 01 | ದಿನಾಂಕ:24-05-2012 ರಂದು ನಡೆದ 12ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:24-05-2012 ರಂದು ನಡೆದ 12ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಪಾಲನ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ಸಭೆಯ ಪಾಲನಾ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 02 | ಸರ್ಕಾರದ ಅಧಿಸೂಚನೆ ಸಂಖ್ಯೆ:ಆ.ಇ. 390 ವೆಚ್ಚ 12/2012, ದಿನಾಂಕ: 16.05.2012 ರ ಅಡಿಯಲ್ಲಿ ಬರುವ ಎಲ್ಲ ಉಪಕರಣ ಖರೀದಿ ಹಾಗೂ ಸೇವೆಯನ್ನು ಕಿಯೋನಿಕ್ಸ್ ಸಂಸ್ಥೆಯ ಮೂಲಕ ಪಡೆಯಲು ಕ್ರಮ ಕೈಗೊಳ್ಳುವ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ DGS&D ದರದಲ್ಲಿ ಲ್ಯಾಪ್ ಟ್ಯಾಪ್ ಮತ್ತು ಪ್ರಿಂಟರ್ಸ್‌ಗಳನ್ನು ಖರೀದಿಸುವ ಬಗ್ಗೆ. | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಟಿಪ್ಪಣಿ ಸಂಖ್ಯೆ: 828:2012, ದಿನಾಂಕ: 12.06.2012ರ ಟಿಪ್ಪಣಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವೈದ್ಯಕೀಯ/ದಂತ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಗಳಲ್ಲಿ ಹಾಗೂ ಪ್ಯಾರಾ ಮೆಡಿಕಲ್ ಬೋರ್ಡ್ ಮತ್ತು ನರ್ಸಿಂಗ್ ಬೋರ್ಡ್‌ಗಳಲ್ಲಿ ಅಮೂಲಾಗ್ರ ತಂತ್ರಜ್ಞಾನ, ತಂತ್ರಾಂಶದ ಅಳವಡಿಕೆ ಮತ್ತು ಕಾಗದ ರಹಿತ (Paper Free) ಆಡಳಿತವನ್ನು ನಡೆಸಲು ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಈ ಕಾರ್ಯವನ್ನು ಸರ್ಕಾರದ ಅಧೀನ ಸಂಸ್ಥೆಯಾದ ಕಿಯೋನಿಕ್ಸ್‌ನಿಂದ ಪಡೆಯಲು ಮಾನ್ಯ ಸಚಿವರು ಸೂಚಿಸಿರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಲ್ಯಾಪ್‌ಟ್ಯಾಪ್ ಮತ್ತು ಪ್ರಿಂಟರ್ಸ್‌ಗಳನ್ನು ಖರೀದಿಸಿ ವಿದ್ಯಾರ್ಥಿಗಳಿಗೆ ವಿತರಿಸಲು ಸರ್ಕಾರದಿಂದ ಅನುದಾನ ಬಿಡುಗಡೆ ಆಗಿರುತ್ತದೆ. ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ [ಕಿಯೋನಿಕ್ಸ್] ಸಂಸ್ಥೆಯಿಂದ ಸದರಿ ಲ್ಯಾಪ್ ಟ್ಯಾಪ್ ಮತ್ತು ಪ್ರಿಂಟರ್ಸ್‌ಗಳನ್ನು DGS&D ದರದಲ್ಲಿ ಖರೀದಿಸಲು ಮತ್ತು ಮುಂದಿನ ದಿನಗಳಲ್ಲಿ ಉಲ್ಲೇಖಿತ ಪತ್ರದಂತೆ ಐಟಿ ಹಾರ್ಡ್‌ವೇರ್, ಐಟಿ ಸಾಫ್ಟ್‌ವೇರ್ ವಿದ್ಯುನ್ಮಾನ ಉಪಕರಣಗಳ ಖರೀದಿ AMC, Data Entry, IT Solution ಅಭಿವೃದ್ಧಿ ಮತ್ತು ನಿರ್ವಹಣೆ, Networking, E-Governance ಹಾಗೂ ಇತರೆ ಸೇವೆಗಳನ್ನು ಕಿಯೋನಿಕ್ಸ್ ಸಂಸ್ಥೆಯ ಮೂಲಕ ಪಡೆಯಲು ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 03 | 1)ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಿಗೆ 2012ನೇ ಸಾಲಿನಲ್ಲಿ ಸಂಸ್ಥೆಯ ವಿವಿಧ ವಿಭಾಗಗಳಿಗೆ ಘಟನೋತ್ತರ ಮಂಜೂರಾತಿ ನಿರೀಕ್ಷಣೆಯ ಮೇರೆಗೆ ಕೆಲವು ರಾಸಾಯನಿಕ ಗಳು ಮತ್ತು ಸಣ್ಣ ಪುಟ್ಟ ಅವಶ್ಯಕ ಉಪಕರಣಗಳನ್ನು ಒಟ್ಟುರೂ.3,03,700.00(ರೂ.ಮೂರು ಲಕ್ಷದ ಮೂರು ಸಾವಿರದ ಏಳುನೂರು ಮಾತ್ರ) ಮೊತ್ತದಲ್ಲಿ ನಿಯಾಮಾನುಸಾರ ಖರೀದಿಸಿದ್ದು, ಸದರಿ ರಾಸಾಯನಿಕಗಳ ಮತ್ತು ಸಣ್ಣ ಪುಟ್ಟ ಉಪಕರಣಗಳಖರೀದಿಗೆ ಅನುಮೋದನೆ ನೀಡುವಬಗ್ಗೆ.<br>2)ಹಿಮ್ಸ್‌ನ ಬೋಧಕ ಆಸ್ಪತ್ರೆಯಾದ ಶ್ರೀಚಾಮರಾಜೇಂದ್ರ ಆಸ್ಪತ್ರೆಗೆ ಬರುವ ಹೊರ ರೋಗಿಗಳು ಮತ್ತು ಒಳರೋಗಿಗಳ, ಯೂಸರ್ಸ್ ಶುಲ್ಕದಿಂದ ಸಂಗ್ರಹವಾಗಿರುವ ಮೊತ್ತದಲ್ಲಿ ಭರಿಸಿರುವ ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ (2011-12 ಮತ್ತು 2012-13) | 1) ಹಾಸನ ವೈದ್ಯಕೀಯ ವಿಜ್ಞಾಗಳ ಸಂಸ್ಥೆಯ ವಿವಿಧ ವಿಭಾಗಳಿಗೆ 2012-13 ನೇ ಸಾಲಿನಲ್ಲಿ ಘಟನೋತ್ತರ ಮಂಜೂರಾತಿ ನಿರೀಕ್ಷಣೆಯ ಮೇರೆಗೆ ಹಾಗೂ ವಿಭಾಗಗಳ ಮುಖ್ಯಸ್ಥರ ಕೋರಿಕೆ ಮೇರೆಗೆ ಕೆಲವು ರಾಸಾಯನಿಕಗಳು ಮತ್ತು ಸಣ್ಣ ಪುಟ್ಟ ಉಪಕರಣಗಳನ್ನು ವಿವಿಧ ವಿಭಾಗಳಿಗೆ ಒಟ್ಟು ರೂ. 3,03,700.00 ಮೊತ್ತದಲ್ಲಿ ತುರ್ತು ಅವಶ್ಯಕತೆ ಇದ್ದಿದ್ದರಿಂದ ಘಟನೋತ್ತರ ಅನುಮೋದನೆಯ ನಿರೀಕ್ಷಣೆಯ ಮೇಲೆ ನಿಯಮಾನುಸಾರ ದರಪಟ್ಟಿ ಮೂಲಕ ರಾಸಾಯನಿಕಗಳು ಮತ್ತು ಸಣ್ಣ ಪುಟ್ಟ ಉಪಕರಣಗಳ ಖರೀದಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.<br>2)ಸಂಸ್ಥೆಯ ಬೋಧಕ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ ಬರುವ ಹೊರರೋಗಿಗಳು ಮತ್ತು ಒಳರೋಗಿಗಳಿಂದ ಸಂಗ್ರಹಿಸಿರುವ ಯೂಸರ್ಸ್ ಫಂಡ್‌ನಿಂದ<br>2011-12ನೇ ಸಾಲಿನಲ್ಲಿ ರೋಗಿಗಳ ಔಷಧೋಪಚಾರ, ಆಸ್ಪತ್ರೆ ವಾರ್ಡ್‌ಗಳ ಸ್ವಚ್ಛತಾ ಸಲುವಾಗಿ ಭರಿಸಲಾಗಿರುವ ಒಟ್ಟು ಮೊತ್ತ ರೂ.1,10,36,831-00<br>2012-13ನೇ ಸಾಲಿನಲ್ಲಿ ರೋಗಿಗಳ ಔಷಧೋಪಚಾರ, ಆಸ್ಪತ್ರೆ ವಾರ್ಡ್‌ಗಳ ಸ್ವಚ್ಛತಾ ಸಲುವಾಗಿ ಭರಿಸಲಾಗಿರುವ ಒಟ್ಟು ಮೊತ್ತ ಭರಿಸಿರುವ ಒಟ್ಟು ಮೊತ್ತ ರೂ.27,30,156-00ಗಳನ್ನು (01-04-2012 ರಿಂದ 10-08-2012) ಒಪ್ಪಿ ಅಂಗೀಕರಿಸಲಾಯಿತು.<br>ಇನ್ನು ಮುಂದೆ ಘಟನ್ನೋತ್ತರ ಮಂಜೂರಾತಿ ಕೋರಿ ಖರ್ಚು ಭರಿಸಿರುವುದನ್ನು ಸಸ್ಥೆಯ ಆರ್ಥಿಕ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಒಪ್ಪಿ ಅನುಮೋದಿಸಲಾಯಿತು. |
| 04 | ಕಾಲೇಜು ಕಟ್ಟಡದ ಮುಖ್ಯದ್ವಾರ ಮತ್ತು ಇತರೆ ದ್ವಾರಗಳಿಗೆ ಭದ್ರತಾ ಹಿತದೃಷ್ಟಿ ಯಿಂದ ಗ್ರಿಲ್ಸ್ ಡೋರ್ ಅಳವಡಿಸುವ ಕಾಮಗಾರಿ ಬಗ್ಗೆ. | ಕಾಲೇಜು ಕಟ್ಟಡದ ಮೊದಲ ಮಹಡಿಯ ಪೂರ್ವ (ಮುಖ್ಯ ದ್ವಾರ), ಪಶ್ಚಿಮ, ದಕ್ಷಿಣ ದಿಕ್ಕುಗಳಲ್ಲಿ ಮೂರು ದ್ವಾರಗಳಿದ್ದು ಇವುಗಳನ್ನು ಈ ಹಿಂದೆ ಗಾಜಿನಿಂದ ನಿರ್ಮಿಸಲಾಗಿರುತ್ತದೆ. ಭದ್ರತಾ ದೃಷ್ಟಿಯಿಂದ ಈ ಬಾಗಿಲುಗಳಿಗೆ ಹೊಂದಿಕೊಂಡಂತೆ ಗ್ರಿಲ್ಸ್ ಡೋರ್ ಅಳವಡಿಸುವುದರ ಬಗ್ಗೆ ಚರ್ಚಿಸಲಾಯಿತು. ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಪಡೆದು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳುವಂತೆ ಸೂಚಿಸಿ ವಿಷಯವನ್ನು ಮುಂದೂಡಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td>05</td><td>ಸಂಸ್ಥೆಯಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಡಾ.ನಳಿನಿ.ಜಿ.ಕೆ ಹಾಗೂ ಸಹಾಯಕ ಪ್ರಾಧ್ಯಾಪಕರಾಗಿದ್ದ ಡಾ.ಜಿ.ಎಂ. ವೆಂಕಟೇಶ್‌ರವರಿಗೆ ಕ್ರಮವಾಗಿ ಪ್ರಾಧ್ಯಾಪಕರು ಹಾಗೂ ಸಹಪ್ರಾಧ್ಯಾಪಕರಾಗಿ ಪದೋನ್ನತಿ ನೀಡಿರುವುದನ್ನು ಅನುಮೋದಿಸುವ ಬಗ್ಗೆ.</td><td>1) ಡಾ. ನಳಿನಿ.ಜಿ.ಕೆ. ಇವರು ದಿನಾಂಕ:28-05-2007 ರಿಂದ ಸಹ ಪ್ರಾದ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರಿಗೆ 1) ಸಂಖ್ಯೆ : ಹಿಮ್ಸ್/ಸಿ(2)/34/2012-13, ದಿನಾಂಕ:25-05-2012. 2) ಮುಂಬಡ್ತಿ ಪರಿಶೀಲನಾ ಸಮಿತಿ ದಿನಾಂಕ:09-03-2012. 3) ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ. ಶಿ), ಬೆಂಗಳೂರು ಇವರ ಅನುಮೋದನೆ, ದಿನಾಂಕ 21-05-2012ಹಾಗೂ ದಿನಾಂಕ:26-05-2012ರ ಆದೇಶದಂತೆ ದಿನಾಂಕ:25-05-2012 ರ ಅಧಿಕೃತ ಜ್ಞಾಪನಾ ಪತ್ರದಂತೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಿ ಆದೇಶ ಮಾಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.<br><br>2) ಡಾ. ವೆಂಕಟೇಶ್.ಜಿ.ಎಮ್. ಇವರು ದಿನಾಂಕ :01-04-2008 ರಿಂದ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು,ಸದರಿಯವರಿಗೆ 1)ಸಂಖ್ಯೆ : ಹಿಮ್ಸ್/ಸಿ(2)/34/2012-13, ದಿನಾಂಕ:25-05-2012.2) ಮುಂಬಡ್ತಿ ಪರಿಶೀಲನಾ ಸಮಿತಿ ದಿನಾಂಕ:09-03-2012. 3) ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ. ಶಿ), ಬೆಂಗಳೂರು ಇವರ ಅನುಮೋದನೆ, ದಿನಾಂಕ 21-05-2012 ಆದೇಶದಂತೆ ದಿನಾಂಕ: 02-06-2012 ರ ಅಧಿಕೃತ ಜ್ಞಾಪನಾ ಪತ್ರದಂತೆ ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡಿ ಆದೇಶ ಮಾಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.
<table>
<tr><th>ಕ್ರ. ಸಂ.</th><th>ಹೆಸರು</th><th>ಹುದ್ದೆ</th><th>ವಿಭಾಗ</th><th>ಪದೋನ್ನತಿ ಹೊಂದಿದ ದಿನಾಂಕ</th></tr>
<tr><td>01</td><td>ಡಾ. ನಳಿನಿ.ಜಿ.ಕೆ</td><td>ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ</td><td>ಔಷಧಶಾಸ್ತ್ರ ವಿಭಾಗ</td><td>25-05-2012</td></tr>
<tr><td>02</td><td>ಡಾ. ವೆಂಕಟೇಶ್.ಜಿ.ಎಂ.</td><td>ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ</td><td>ಸಮುದಾಯ ವೈದ್ಯಶಾಸ್ತ್ರ ವಿಭಾಗ</td><td>02-06-2012</td></tr>
</table></td></tr>
<tr><td>06</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗದ ಬೋಧಕ ಹುದ್ದೆಗಳಿಗೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ವೈದ್ಯರುಗಳ ಖಾಯಂ ಪೂರ್ವ ಸೇವಾವಧಿ ಪೂರೈಸಿ ಘೋಷಿಸಬೇಕಾದ ವೈದ್ಯರುಗಳ</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿನ ವಿವಿಧ ಬೋಧಕರುಗಳು ಎರಡು ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುವ ಈ ಕೆಳಕಂಡ ಸಿಬ್ಬಂದಿಗಳ ಪಟ್ಟಿಯನ್ನುಸರ್ಕಾರದ ಅನುಮೊದನೆಗೆ ಸಲ್ಲಿಸಿದ್ದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ದಿನಾಂಕ:11.06.2012 ಮತ್ತು ದಿನಾಂಕ:15.06.2012ರ ಶಿಫಾರಸ್ಸಿನನ್ವಯ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಿನಾಂಕ:11.06.2012 ಮತ್ತು ದಿನಾಂಕ:15.06.2012ರಂದು ಅನುಮೊದನೆ ನೀಡಿದ್ದು. ಅದರಂತೆ ಉಲ್ಲೇಖ(3)ರ ಅನ್ವಯ ಪರಿವೀಕ್ಷಣಾ ಅವಧಿ ಪೂರೈಸಿರುವ ಬಗ್ಗೆ ಘೋಷಣೆಯನ್ನು ಮಾಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ವಿವರಗಳು. | ಬೋಧಕ ಸಿಬ್ಬಂದಿಯವರ ಪರಿವೀಕ್ಷಣಾ ಅವಧಿಯನ್ನು (Probationary) ಘೋಷಿಸ ಬೇಕಾದವರ ಪಟ್ಟಿ ಈ ಕೆಳಕಂಡಂತಿರುತ್ತದೆ. |

| ಕ್ರ.ಸಂ. | ಹೆಸರು | ಹುದ್ದೆ | ಇಂದ | ವರೆಗೆ |
|---|---|---|---|---|
| 1 | 2 | 3 | 4 | 5 |
| 01 | ಡಾ. ಧನಂಜಯ.ಜೆ.ಆರ್. | ಸಹ ಪ್ರಾಧ್ಯಾಪಕರು | 16.02.2009 ಪೂರ್ವಾಹ್ನ | 15.02.2011 ಅಪರಾಹ್ನ |
| 02 | ಡಾ. ಶ್ರೀಧರ್.ಹೆಚ್.ಜಿ. | ಸಹ ಪ್ರಾಧ್ಯಾಪಕರು | 30.12.2008 ಪೂರ್ವಾಹ್ನ | 29.12. 2010 ಅಪರಾಹ್ನ |
| 03 | ಡಾ. ಪಾಲಚಂದ್ರ. ಎ. | ಸಹ ಪ್ರಾಧ್ಯಾಪಕರು | 27.07.2009 ಪೂರ್ವಾಹ್ನ | 26.07. 2011 ಅಪರಾಹ್ನ |
| 04 | ಡಾ.ಗಿರಿಜ.ಬಿ.ಎಸ್. | ಸಹ ಪ್ರಾಧ್ಯಾಪಕರು | 27.11.2009 ಪೂರ್ವಾಹ್ನ | 26.11. 2011 ಅಪರಾಹ್ನ |
| 05 | ಡಾ.ಪ್ರವೀಣ್.ಜಿ | ಸಹಾಯಕ ಪ್ರಾಧ್ಯಾಪಕರು | 19.06.2009 ಪೂರ್ವಾಹ್ನ | 18.06. 2011 ಅಪರಾಹ್ನ |
| 06 | ಡಾ. ದಾದಾಪಿರ್.ಕೆ. | ಸಹಾಯಕ ಪ್ರಾಧ್ಯಾಪಕರು | 25.04. 2009 ಪೂರ್ವಾಹ್ನ | 24.04. 2011 ಅಪರಾಹ್ನ |
| 07 | ಡಾ. ಸಹನಾ.ಜಿ.ಎನ್ | ಸಹಾಯಕ ಪ್ರಾಧ್ಯಾಪಕರು | 01.07.2009 ಪೂರ್ವಾಹ್ನ | 30.06. 2011 ಅಪರಾಹ್ನ |
| 08 | ಡಾ. ವಿಜಯ್.ಪಿ.ಎಂ. | ಸಹಾಯಕ ಪ್ರಾಧ್ಯಾಪಕರು | 02.02.2009 ಪೂರ್ವಾಹ್ನ | 01.02.2011 ಅಪರಾಹ್ನ |
| 09 | ಡಾ. ಮಂಜುನಾಥ್.ಸಿ.ಎಸ್. | ಸಹಾಯಕ ಪ್ರಾಧ್ಯಾಪಕರು | 20.06.2009 ಪೂರ್ವಾಹ್ನ | 19.06. 2011 ಅಪರಾಹ್ನ |
| 10 | ಡಾ. ತೇಜಶ್ವರಿ.ಹೆಚ್.ಎಲ್. | ಸಹಾಯಕ ಪ್ರಾಧ್ಯಾಪಕರು | 29.06.2009 ಪೂರ್ವಾಹ್ನ | 28.06. 2011 ಅಪರಾಹ್ನ |
| 11 | ಡಾ. ಹಾಲೇಶ್.ಬಿ.ಆರ್. | ಸಹಾಯಕ ಪ್ರಾಧ್ಯಾಪಕರು | 12.11. 2009 ಪೂರ್ವಾಹ್ನ | 11.11. 2011 ಅಪರಾಹ್ನ |
| 12 | ಡಾ. ಮಮತಾ.ವೈ. | ಸಹಾಯಕ ಪ್ರಾಧ್ಯಾಪಕರು | 25.01.2010 ಪೂರ್ವಾಹ್ನ | 24.01. 2012 ಅಪರಾಹ್ನ |
| 13 | ಡಾ. ಸಿದ್ದರಾಮ್.ಎಸ್.ಎಮ್. | ಸಹಾಯಕ ಪ್ರಾಧ್ಯಾಪಕರು | 18.12. 2009 ಪೂರ್ವಾಹ್ನ | 17.12. 2011 ಅಪರಾಹ್ನ |
| 14 | ಡಾ. ನಿರಂಜನ್.ಎಂ.ಆರ್. | ಸಹಾಯಕ ಪ್ರಾಧ್ಯಾಪಕರು | 20.01.2010 ಪೂರ್ವಾಹ್ನ | 19.01. 2012 ಅಪರಾಹ್ನ |
| 15 | ಡಾ.ಬಿಂದು.ಸಿ.ಬಿ.. | ಸಹಾಯಕ ಪ್ರಾಧ್ಯಾಪಕರು | 12.11. 2009 ಪೂರ್ವಾಹ್ನ | 11.11. 2011 ಅಪರಾಹ್ನ |
| 16 | ಡಾ. ಭಾರತಿ.ಜಿ. | ಹಿರಿಯ ಸ್ಥಾನಿಯ ವೈದ್ಯರು | 02.04. 2009 ಪೂರ್ವಾಹ್ನ | 01.04. 2011 ಅಪರಾಹ್ನ |
| 17 | ಡಾ. ಸಿ.ಜಿ.ಮಂಜುಳ. | ಬೋಧಕರು | 22.06.2006 ಪೂರ್ವಾಹ್ನ | 21.06.2008 ಅಪರಾಹ್ನ |
| 18 | ಡಾ.ಆನಂದ್.ಡಿ | ಬೋಧಕರು | 01.12.2006 ಪೂರ್ವಾಹ್ನ | 30.11.2008 ಅಪರಾಹ್ನ |
| 19 | ಡಾ.ಮಮತಾ.ಬಿ.ಎಸ್. | ಬೋಧಕರು | 14.08.2006 ಪೂರ್ವಾಹ್ನ | 13.08.2008 ಅಪರಾಹ್ನ |

| | | |
|---|---|---|
| 07 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಸಿಬ್ಬಂದಿಗಳು ಉನ್ನತ ವ್ಯಾಸಂಗಕ್ಕಾಗಿ ತೆರಳಿದ್ದು ಅವರ ವೇತನ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕ ಸಿಬ್ಬಂದಿಗಳು ಉನ್ನತ ವ್ಯಾಸಂಗಕ್ಕಾಗಿ ತೆರಳಿರುತ್ತಾರೆ. ಈ ಹಿಂದೆ ಇದೇ ರೀತಿ 4 ಮಂದಿ ಬೋಧಕ ಸಿಬ್ಬಂದಿಗಳು ಉನ್ನತ ವ್ಯಾಸಂಗಕ್ಕೆ ತೆರಳಿದ್ದು ಅವರುಗಳಿಗೆ ವೇತನ ನೀಡುವ ಬಗ್ಗೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳ ನಿರ್ದೇಶನದ ಮೇರೆ ಪಾವತಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಮತ್ತು ಭತ್ಯೆಗಳನ್ನು ಪಾವತಿಸಲು ಆಡಳಿತ ಮಂಡಳಿಯ ಅನುಮೋದನೆಗೆ ಸಲ್ಲಿಸುವ ಬಗ್ಗೆ.</td><td>ಮಾಡಿರುತ್ತದೆ. ಈ ಕ್ರಮಕ್ಕೆ ಸರ್ಕಾರದ ಅನುಮೋದನೆ ಸಹ ದೊರೆತಿರುತ್ತದೆ ಹಾಗೂ ಆಡಳಿತ ಮಂಡಳಿಯಿಂದಲೂ ಅನುಮೋದನೆಯಾಗಿದೆ. ಅದೇ ರೀತಿ ಇವರಿಗೂ ಸಹ ವೇತನ ಮತ್ತು ಭತ್ಯೆಗಳನ್ನು ಪಾವತಿಸಬಹುದೆಂದು ಒಪ್ಪಿ ಮತ್ತು ಸ್ನಾತ್ತಕೋತ್ತರ ವ್ಯಾಸಂಗಕ್ಕೆ ಶೇ5%ರಷ್ಟನ್ನು ಮೀರದಂತೆ ನಿರ್ವಹಿಸಲು ಒಪ್ಪಿ ಅನುಮೋದಿಸಲಾಯಿತು.
<table>
<tr><th>ಕ್ರ. ಸಂ.</th><th>ಹೆಸರು</th><th>ಹುದ್ದೆ ಮತ್ತು ವಿಭಾಗ</th><th>ಉನ್ನತ ವ್ಯಾಸಂಗದ ವಿಷಯ</th><th>ನಿಯೋಜನೆ ಗೊಂಡಿರುವ ಸಂಸ್ಥೆ</th></tr>
<tr><td>01</td><td>ಡಾ.ರೋಸಮ್ಮ ಜಾರ್ಜ್</td><td>ಸಹಾಯಕ ಪ್ರಾಧ್ಯಾಪಕರು, ದಂತ ಚಿಕಿತ್ಸಾ ವಿಭಾಗ</td><td>MDS, Dentistry</td><td>ಹಾಸನಾಂಬ ಡೆಂಟಲ್ ಕಾಲೇಜು</td></tr>
<tr><td>02</td><td>ಡಾ.ಬೇಲೂರೇಗೌಡ.ಪಿ.ಆರ್.</td><td>ಹಿರಿಯ ಸ್ಥಾನಿಯ ವೈದ್ಯರು, ಕಿವಿ, ಮೂಗು,ಗಂಟಲು ವಿಭಾಗ</td><td>MS, ENT</td><td>BMC, Bangalore</td></tr>
</table></td></tr>
<tr><td>08</td><td>ಸಹಾಯಕಆಡಳಿತಾಧಿಕಾರಿಗಳು ಮತ್ತು ಕಛೇರಿ ಅಧೀಕ್ಷಕರ ಹುದ್ದೆಗೆ ನಿವೃತ್ತಿ ಹೊಂದಿದ ನೌಕರರನ್ನು ನೇಮಕ ಮಾಡಿಕೊಂಡಿದ್ದು, ಆ ಹುದ್ದೆಗಳ ವೇತನ ಶ್ರೇಣಿಗಳಲ್ಲಿನ ಕನಿಷ್ಠ ವೇತನ ನಿಗದಿಪಡಿಸುವ ಬಗ್ಗೆ.</td><td>(ಎ)ಶ್ರೀ.ಎಸ್.ಜಿ.ಕುಮಾರಸ್ವಾಮಿ, ಸಹಾಯಕ ಆಡಳಿತಾಧಿಕಾರಿಯವರು ದಿನಾಂಕ:29-09-2009ರ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಕುಕ 159 ಕೆವಿಎಂ 2009ರಲ್ಲಿ ಈ ಸಂಸ್ಥೆಯ ಬೈಲಾ ನಿಯಮ 8(5)ರ ಪ್ರಕಾರ ನಿವೃತ್ತ ತಹಸೀಲ್ದಾರ್ ಆಗಿದ್ದರಿಂದ ಕನಿಷ್ಠ ಕ್ರೋಢಿಕೃತ ವೇತನ ರೂ. 10,000-00 ರಂತೆ ದಿನಾಂಕ: 01-10-2009 ರಂದು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಮೇಲ್ಕಂಡ ಬೈಲಾ ನಿಯಮ ಪ್ರಕಾರ 8(5)ರಲ್ಲಿ ತಹಸೀಲ್ದಾರ್ ಹುದ್ದೆಗೆ ಸಮನಾಂತರ ಆಗಿರುವುದರಿಂದ ಪರಿಷ್ಕೃತ ವೇತನ ಶ್ರೇಣಿ ನಿಯಮ 2012ರ ತಹಸೀಲ್ದಾರ್ ವೇತನ ಶ್ರೇಣಿ ರೂ. 28,100-50,100 ರಲ್ಲಿ ಕನಿಷ್ಠ ವೇತನ ದಿನಾಂಕ: 01-08-2012ರಿಂದ ನಿಗದಿಪಡಿಸುವಂತೆ ಕೋರಿರುತ್ತಾರೆ.<br><br>(ಬಿ) ಶ್ರೀ. ವೈ. ಕೊಟ್ರಪ್ಪ, ಕಛೇರಿ ಅಧೀಕ್ಷಕರು ರವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಕುಕ (ವೈ.ಶಿ), ಬೆಂಗಳೂರು ರವರ ನಿರ್ದೇಶನ ದಿನಾಂಕ: 27-06-2012 ರನ್ವಯ ಸದರಿಯವರನ್ನು ಕಛೇರಿ ಅಧೀಕ್ಷಕರ ಹುದ್ದೆಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಆದೇಶಿಸಿದ್ದು, ಈ ಸಂಸ್ಥೆಯ ಬೈಲಾ8(5)ರ ಪ್ರಕಾರ ಇವರು ಆಡಳಿತ ಮಂಡಳಿಯ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಖಾಲಿ ಇರುವ ಕಛೇರಿ ಅಧೀಕ್ಷಕರ ಹುದ್ದೆಗೆ ಹಾಲಿ ನಿವೃತ್ತ ಕಛೇರಿ ಅಧೀಕ್ಷಕರು ಈ ಸಂಸ್ಥೆಯ ಬೈಲಾ ನಿಯಮ 8(5)ರ ಕನಿಷ್ಠ ಕ್ರೋಢೀಕೃತ ಮಾಸಿಕ ವೇತನ ರೂ. 10,000/- ರಂತೆ ನೇಮಕಾತಿ ದಿನಾಂಕ: 05-07-2012 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಇವರ ನೇಮಕಾತಿ ಒಪ್ಪಿ ಅಂಗೀಕರಿಸಲಾಯಿತು.<br><br>ಬೈಲಾ ನಿಯಮ 8(5)ರ ಪ್ರಕಾರ ಕಛೇರಿ ಅಧೀಕ್ಷಕರ ಹುದ್ದೆಗೆ ಸಮನಾಂತರ ಆಗಿರುವುದರಿಂದ ಪರಿಷ್ಕೃತ ವೇತನ ಶ್ರೇಣಿ ನಿಯಮ 2012ರ ಪ್ರಕಾರ ಕಛೇರಿ ಅಧೀಕ್ಷಕರ ವೇತನ ಶ್ರೇಣಿ ರೂ. 20,000/-ರಲ್ಲಿ ಕನಿಷ್ಠ ವೇತನ ದಿನಾಂಕ:</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | 01-08-2012 ರಿಂದ ನಿಗದಿಪಡಿಸುವಂತೆ ಕೋರಿರುತ್ತಾರೆ.<br>ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ನಿವೃತ್ತಿಹೊಂದಿದ ಅಧಿಕಾರಿಗಳನ್ನು ಸ್ವಾಯತ್ತ ಸಂಸ್ಥೆಗಳಿಗೆ ನೇಮಕ ಮಾಡಿಕೊಂಡಾಗ ನಿಗದಿತವಾದ ಕ್ರೋಡೀಕೃತ ಮಾಸಿಕ ವೇತನ ವನ್ನು ನಿಗದಿ ಪಡಿಸಲು ಸರ್ಕಾರದಿಂದ ಆದೇಶ ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸರ್ಕಾರದ ಉಪ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರಿಗೆ ಸೂಚಿಸಲಾಯಿತು. |
| 09 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಉಪಕರಣಗಳ ಮೇಲ್ವಿಚಾರಣೆಯನ್ನು ಒಬ್ಬ ಬಯೋ ಮೆಡಿಕಲ್ ತಂತ್ರಜ್ಞರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಅಧಿಕ ಮೌಲ್ಯದ ಉಪಕರಣಗಳನ್ನು ಖರೀದಿಸಿ ಅಳವಡಿಸಲಾಗಿರುತ್ತದೆ. ಸದರಿ ಉಪಕರಣಗಳು ಕೆಲವೊಮ್ಮೆ ತಾಂತ್ರಿಕ ಸಮಸ್ಯೆಗೆ ಒಳಪಡುವುದರಿಂದ ತುರ್ತಾಗಿ ರಿಪೇರಿ ಮಾಡಬೇಕಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಬಯೋ ಮೆಡಿಕಲ್ ತಂತ್ರಜ್ಞರು ಲಭ್ಯವಿಲ್ಲದಿರುವುದರಿಂದ ಬೇರೆ ಸ್ಥಳಗಳಿಂದ ತಂತ್ರಜ್ಞರನ್ನು ಕರೆಸಿ ರಿಪೇರಿ ಮಾಡಿಸಲು ಕಾಲ ವಿಳಂಬದೊಂದಿಗೆ ರಿಪೇರಿಯ ಖರ್ಚು ವೆಚ್ಚಗಳೂ ಸಹ ಅಧಿಕವಾಗುತ್ತದೆ. ಆದುದರಿಂದ ಈ ಸಮಸ್ಯೆಯನ್ನು ನಮ್ಮ ವ್ಯಾಪ್ತಿಯಲ್ಲಿಯೇ ಸರಿಪಡಿಸಿಕೊಳ್ಳಲು ಅನುಕೂಲವಾಗುವಂತೆ ಮತ್ತು ಮುಂದಿನ ದಿನಗಳಲ್ಲಿ ಉಪಕರಣಗಳನ್ನು ಖರೀದಿಸುವಾಗ ಬಯೋ ಮೆಡಿಕಲ್ ತಂತ್ರಜ್ಞರ ಅವಶ್ಯಕತೆಯು ಸಹ ಇರುವುದರಿಂದ ಒಬ್ಬ ಬಯೋ ಮೆಡಿಕಲ್ ತಂತ್ರಜ್ಞರ ಹುದ್ದೆಯು ಅವಶ್ಯಕತೆ ಇದ್ದು, ಸದರಿ ತಂತ್ರಜ್ಞರ ನೇಮಕಾತಿ ಹುದ್ದೆ ಸೃಜಿಸಲು ಸರ್ಕಾರಕ್ಕೆ ಪತ್ರ ಬರೆಯಲು ಸೂಚಿಸಲಾಯಿತು. |
| 10 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯು ವಿಲೀನ ಗೊಂಡ ಸಂದರ್ಭದಲ್ಲಿ 29 ತಜ್ಞ ವೈದ್ಯರ ಪೈಕಿ 11 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳುವಿಲೀನಗೊಂಡಿರುವುದನ್ನು ಹಾಗೂ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಹುದ್ದೆಗಳನ್ನು ವಿವಿಧ ವಿಭಾಗಗಳಿಗೆ ಹಂಚಿಕೆ ಮಾಡಿರುವುದನ್ನು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಅನುಮೋದಿಸಿರುವುದನ್ನು ಒಪ್ಪಿಗೆ ನೀಡುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಶ್ರೀ ಜಯಚಾಮರಾಜೇಂದ್ರ ಆಸ್ಪತ್ರೆಯು ವಿಲೀನಗೊಂಡ ಸಂದರ್ಭದಲ್ಲಿ 29 ತಜ್ಞ ವೈದ್ಯರ ಪೈಕಿ 11 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ವಿಲೀನಗೊಂಡಿದ್ದು, ಆ ಹುದ್ದೆಗಳನ್ನು ಹೆಚ್ಚುವರಿ ಹುದ್ದೆಯಾಗಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಮಂಜೂರಾತಿ ನೀಡಿರುತ್ತಾರೆ. ಈ ಮಂಜೂರಾತಿಯನ್ನು ಅನುಮೋದಿಸುವ ಹಾಗೂ ವಿಭಾಗಗಳಿಗೆ ಹುದ್ದೆಗಳನ್ನು ಹಂಚಿಕೆ ಮಾಡಿರುವುದನ್ನೂ ಒಪ್ಪಿ ಅಂಗೀಕರಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 11 | ಭಾರತೀಯ ಸೇನೆಯಲ್ಲಿ ಪಶ್ಚಿಮ ಬಂಗಾಳದ ಗಡಿಯಲ್ಲಿ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು, ಹಳೇಕೋಟೆ ಹೋಬಳಿ\|\|, ಹರದನಹಳ್ಳಿ ಗ್ರಾಮವಾಸಿ ಶ್ರೀ. ಹೆಚ್.ಟಿ. ಕಾಂತರಾಜುರವರು ಕಾರ್ಯ ನಿರ್ವಹಿಸುತ್ತಿರುವಾಗ ಕಾಳಸಂತೆಕೋರರ ಧಾಳಿಯಿಂದ ನಿಧನ ಹೊಂದಿದ್ದು, ಬಲಿಯಾದ ಸದರಿಯವರ ಪತ್ನಿ ಶ್ರೀಮತಿ. ಬಿ.ವಿ. ಹೇಮಾವತಿ ಇವರಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನದಲ್ಲಿ ವಿದ್ಯಾರ್ಹತೆಯಅನುಗುಣವಾಗಿ ಒಂದು ಉದ್ಯೋಗವನ್ನು ಮಂಜೂರು ಮಾಡುವ ಬಗ್ಗೆ. | ಈ ಸಂಸ್ಥೆಯಲ್ಲಿ ಹುದ್ದೆ ಖಾಲಿ ಇಲ್ಲದಿರುವುದರಿಂದ ವಿಷಯವನ್ನು ಕೈಬಿಡಲಾಗಿದೆ. |
| 12 | ಸಂಸ್ಥೆಯಲ್ಲಿ ಪ್ರಯೋಗಾಲಯ ತಂತ್ರಜ್ಞರಾಗಿ ನೇಮಕವಾಗಿ ಕಾರ್ಯನಿರ್ವಹಿಸುತ್ತಿದ್ದು ಈ ನೇಮಕಾತಿಯನ್ನು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿ ರಿಟ್ ಅರ್ಜಿ ಇನ್ನು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಈ ಮಧ್ಯೆ ಶ್ರೀ. ಮಹೇಶ್ ಕುಮಾರ್.ಎಲ್ ಹಾಗೂ ವಂದಿತಾ.ಎಂ.ಆರ್. ಮತ್ತು ಓ.ಟಿ. ತಂತ್ರಜ್ಞರಾಗಿ ಕಾರ್ಯ ನಿರ್ವಹಿಸುತ್ತಿದ್ದ ರೇವಣಪ್ಪ ರಾಜಮುನಿರವರು ಸ್ವ-ಇಚ್ಛೆಯಿಂದ ಕೆಲಸಕ್ಕೆ ರಾಜೀನಾಮೆ ನೀಡಿರುವುದನ್ನು | ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಈ ಕೆಳಕಂಡ ನೌಕರರುಗಳು ಪ್ರಯೋಗಶಾಲಾ ತಂತ್ರಜ್ಞರು, ಹಾಗೂ ಓ.ಟಿ. ತಂತ್ರಜ್ಞರಾಗಿ ಈ ಸಂಸ್ಥೆಗೆ ನೇಮಕವಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ನೇಮಕಾತಿಯನ್ನು ರಾಜ್ಯ ಉಚ್ಛನ್ಯಾಯಾಲಯದಲ್ಲಿ ಪ್ರಶ್ನಿಸಿಲಾಗಿದ್ದು, ರಿಟ್ ಅರ್ಜಿ ಇನ್ನು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಈ ಮಧ್ಯೆ ಇವರುಗಳು ವೈಯಕ್ತಿಕ ಕಾರಣಗಳಿಂದ ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಅವರ ಹುದ್ದೆಗೆ ರಾಜೀನಾಮೆ ಸಲ್ಲಿಸಿರುವುದರ ಬಗ್ಗೆ ಸಭೆಯಲ್ಲಿ ಮಂಡಿಸಲಾಯಿತು. ಸದರಿ ನೌಕರರ ರಾಜೀನಾಮೆಯನ್ನು ಅಂಗೀಕರಿಸಲಾಯಿತು. |

| ಕ್ರ.ಸಂ. | ಹೆಸರು | ಹುದ್ದೆ | ರಾಜೀನಾಮೆ ನೀಡಿದ ದಿನಾಂಕ |
|---|---|---|---|
| 1 | 2 | 3 | 4 |
| 01 | ಮಹೇಶ್ ಕುಮಾರ್.ಎಲ್. | ಪ್ರಯೋಗಾಲಯ ತಂತ್ರಜ್ಞರು | 31-10-2011 |
| 02 | ವಂದಿತಾ.ಎಂ.ಆರ್. | ಪ್ರಯೋಗಾಲಯ ತಂತ್ರಜ್ಞರು | 23-02-2012 |
| 03 | ರೇವಣ್ಣಪ್ಪ ರಾಜಮನಿ | ಓ.ಟಿ. ತಂತ್ರಜ್ಞರು | 05-11-2011 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಅಂಗೀಕರಿಸುವ ಬಗ್ಗೆ. | |
| 13 | ಹಾಸನ ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯವು ಹಿಮ್ಸ್ ಸಂಸ್ಥೆಗೆ ವಿಲೀನ ಗೊಂಡಿರು ವುದರಿಂದ 2012-13ನೇ ಸಾಲಿಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವ ಅನುದಾನವನ್ನು ಹಿಮ್ಸ್ ಸಂಸ್ಥೆಗೆ ಬಿಡುಗಡೆ ಮಾಡುವ ಬಗ್ಗೆ. | ಸರ್ಕಾರದ ಆದೇಶ ಸಂಖ್ಯೆ: ಆಕುಕ 100 ಎಂಎಂಸಿ 2012, ಬೆಂಗಳೂರು ದಿನಾಂಕ:11.07.2012ರ ಆದೇಶದನ್ವಯ ಹಾಸನ ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯವು ಹಿಮ್ಸ್ ಸಂಸ್ಥೆಗೆ ವಿಲೀನಗೊಂಡಿರುವುದರಿಂದ 2012-13ನೇ ಸಾಲಿಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವ ಉಳಿದ ಅನುದಾನವನ್ನು ಹಿಮ್ಸ್ ಸಂಸ್ಥೆಗೆ ಬಿಡುಗಡೆ ಮಾಡುವ ಬಗ್ಗೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ವೈ.ಶಿ) ಇವರಿಗೆ ಅನುದಾನ ಬಿಡುಗಡೆ ಮಾಡಲು ಕೋರಿ ಬರೆದಿರುವ ಪತ್ರಕ್ಕೆ ಒಪ್ಪಿ ಅನುಮೋದಿಸಲಾಯಿತು. |
| 14 | ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯದ ಉಪನ್ಯಾಸಕರ ತೀವ್ರ ಕೊರತೆಯ ಇದ್ದು, ಕೊರತೆ ಯಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ. | ಸರ್ಕಾರಿ ಆದೇಶ ಸಂಖ್ಯೆ ಆಕುಕ 100 ಎಂಎಂಸಿ 2012, ದಿನಾಂಕ:11-07-2012ರಲ್ಲಿ ಹಾಸನ ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯವನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಅಧೀನಕ್ಕೆ ಒಳಪಡಿಸಿ ಆದೇಶ ನೀಡಲಾಗಿದೆ. ಹಾಲಿ ಸಂಸ್ಥೆಯಲ್ಲಿ ಸರ್ಕಾರದಿಂದ ಮಂಜೂರಾಗಿರುವ ಬೋಧಕರ ಹುದ್ದೆಯನ್ನು 42 ರಲ್ಲಿ 12 ಬೋಧಕರು ಕರ್ತವ್ಯ ನಿರ್ವಹಿಸುತ್ತಿದ್ದು 30 ಹುದ್ದೆ ಖಾಲಿ ಇರುತ್ತದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಸಂಸ್ಥೆಯನ್ನು INC & KNC ನಿಯಮಾವಳಿ ಪ್ರಕಾರ ನವೀಕರಿಸಲು ಹುದ್ದೆಗಳನ್ನು ಭರ್ತಿ ಮಾಡಬೇಕಾಗಿರುವುದರಿಂದ ಈ ಸಂಸ್ಥೆಯ ಆಡಳಿತ ಮಂಡಳಿ ವ್ಯಾಪ್ತಿಗೆ ಸೇರಿರುವುದರಿಂದ ಖಾಲಿ ಹುದ್ದೆಗಳನ್ನು ನೇಮಕಾತಿ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿಯಮಾನುಸಾರ Walk-in -Interview ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. ಹಾಗೂ ಹಾಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯೋಜನೆ ಮೇಲೆ ನಿರ್ವಹಿಸುತ್ತಿರುವ ನೌಕರರು ಸ್ವಾಯತ್ತ ಸಂಸ್ಥೆಗೆ ವಿಲೀನಗೊಳ್ಳಲು ಒಪ್ಪಿಗೆ ಪತ್ರ ಸಲ್ಲಿಸಿದ್ದಲ್ಲಿ ಅಂಗೀಕರಿಸಲು ಸರ್ಕಾರಕ್ಕೆ ಪತ್ರ ಬರೆಯಲು ಒಪ್ಪಿ ಅನುಮೋದಿಸಲಾಯಿತು. |

| ಕ್ರ. ಸಂ. | ಹುದ್ದೆಗಳ ವಿವರ | INC ಪ್ರಕಾರ | ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆ | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | 2 | 3 | 4 | 5 | 6 |
| 01 | ಪ್ರಾಧ್ಯಾಪಕರು/ಪ್ರಾಂಶುಪಾಲರು | 1 | 1 | - | 1 |
| 02 | ಪ್ರಾಧ್ಯಾಪಕರು/ಉಪ ಪ್ರಾಂಶುಪಾಲರು | 1 | 1 | - | 1 |
| 03 | ಸಹ ಪ್ರಾಧ್ಯಾಪಕರು/ರೀಡರ್ | 7 | 2 | - | 2 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><td>04</td><td>ಉಪನ್ಯಾಸಕರು</td><td>15</td><td>10</td><td>6</td><td>4</td></tr>
<tr><td>05</td><td>ಟ್ಯೂಟರ್/ಕ್ಲಿನಿಕಲ್ ಇನ್‌ಸ್ಟ್ರಕ್ಟರ್</td><td>28</td><td>28</td><td>6</td><td>22</td></tr>
<tr><td></td><td>ಒಟ್ಟು</td><td>52</td><td>42</td><td>12</td><td>30</td></tr>
</table>
</td></tr>
<tr><td>15</td><td>ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಹಾಸನ 15 ಕೆ.ವಿ. ಜನರೇಟರ್ ಖರೀದಿಸುವ ಬಗ್ಗೆ.</td><td>ಸರ್ಕಾರಿ ಆದೇಶ ಸಂಖ್ಯೆ:ಆಕುಕ 100 ಎಂಎಂಸಿ 2012, ದಿನಾಂಕ: 11-07-2012ರಲ್ಲಿ ಹಾಸನ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯವನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧಿನಕ್ಕೆ ಒಳಪಡಿಸಿ ಆದೇಶ ನೀಡಲಾಗಿದೆ. ಈ ಸಂಸ್ಥೆಯ ಅಧೀನಕ್ಕೆ ಒಳಪಡಿಸಿ ಆದೇಶ ನೀಡಲಾಗಿದೆ. ಈ ಸಂಸ್ಥೆಯ ವಿದ್ಯಾರ್ಥಿಗಳ ತರಬೇತಿಗಾಗಿ ಮತ್ತು ಪರೀಕ್ಷೆ ನಡೆಯುವಾಗ ವಿದ್ಯುತ್‌ಚ್ಛಕ್ತಿಯ ಅಭಾವದಿಂದ ತೊಂದರೆ ಆಗಿರುತ್ತದೆ. ಆದುದರಿಂದ ಅವಶ್ಯಕವಾಗಿರುವ 15 ಕೆ.ವಿ. ಜನರೇಟರ್ ಬಗ್ಗೆ ಚರ್ಚಿಸಿ 15 ಕೆ.ವಿ. ಜನರೇಟ್ ಸಂಸ್ಥೆಗೆ ಸಾಲದೇ ಇರುವುದರಿಂದ ಬದಲು 65.ಕೆ.ವಿ. ಜನರೇಟರ್‌ಅನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ಪಡೆದು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ ನಂತರ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.</td></tr>
<tr><td>16</td><td>ಪರೀಕ್ಷಾ ಕೇಂದ್ರಕ್ಕೆ ಅಗತ್ಯವಿರುವ ವಿದ್ಯುನ್ಮಾನ ಉಪಕರಣಗಳ ಖರೀದಿ ಬಗ್ಗೆ.</td><td>ಪ್ರಸ್ತುತ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮೆಡಿಕಲ್, ಪ್ಯಾರಾ ಮೆಡಿಕಲ್ ಮತ್ತು ಜಿಲ್ಲೆಯ ವಿವಿಧ ನರ್ಸಿಂಗ್ ಶಾಲೆಗಳಿಗೆ ಪರೀಕ್ಷಾ ಕೇಂದ್ರವನ್ನಾಗಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿದ್ದು, ಸದರಿ ಪರೀಕ್ಷೆಗಳು ಯಾವುದೇ ತೊಂದರೆ ಇಲ್ಲದೆ ಸುಸೂತ್ರವಾಗಿ ನಡೆಸಲು ಅನುಕೂಲವಾಗುವಂತೆ ಈ ಕೆಳಕಂಡ ಉಪಕರಣಗಳು ತುರ್ತು ಅಗತ್ಯವಿದ್ದು, ಇವುಗಳನ್ನು ಪಾರದರ್ಶಕನಿಯಮದಡಿ DGS&Dದರದಲ್ಲಿ ಖರೀದಿಸಲುಒಪ್ಪಿ ಅಂಗೀಕರಿಸಲಾಯಿತು.
<table>
<tr><th>ಕ್ರ.ಸಂ.</th><th>ಬೇಕಾಗಿರುವ ಉಪಕರಣಗಳು</th><th>ಸಂಖ್ಯೆ</th><th>ಷರಾ</th></tr>
<tr><td>01</td><td>Copier</td><td>02</td><td>High speed multi functional copier.</td></tr>
<tr><td>02</td><td>Computer</td><td>02</td><td>Windows 7 Home Basic, 2GB Ram, Intel Processor I5, 500GB Hard Disc, 16`` HD Display Monitor, Key Board, Mouse.</td></tr>
<tr><td>03</td><td>UPS</td><td>02</td><td>Atleast Half an Hour Back up.</td></tr>
<tr><td>04</td><td>Printer</td><td>02</td><td>HP 1020 Lazerjet Printer</td></tr>
<tr><td>04</td><td>Internet connection</td><td>02</td><td>100 MBPS speed Broad Band.</td></tr>
<tr><td>05</td><td>Almera</td><td>02</td><td>6/4`` 2 doors.</td></tr>
</table>
</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
| --- | --- | --- |
| 17 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ಕಾಲೇಜು ಕಟ್ಟಡ ಹಾಸ್ಟಲ್ ಕಟ್ಟಡ ಮತ್ತು ಸಿಬ್ಬಂದಿ ವಸತಿ ಗೃಹ ಕಟ್ಟಡಗಳಲ್ಲಿ ಡೀಸಲ್ ಜನರೇಟರ್ ಸ್ಥಾಪನೆ ಮತ್ತು ಕಟ್ಟಡಗಳಲ್ಲಿ ಪವರ್ ಫ್ಯಾಕ್ಟರ್ ಅಭಿವೃದ್ಧಿ ಪಡಿಸಲು ಕೆಪಾಸಿಟರ್ ಪ್ಯಾನಲ್ ಅಳವಡಿಕೆಯ ಆಡಳಿತಾತ್ಮಕ ಅನುಮೋದನೆಗಾಗಿ ಮತ್ತು ಅನುದಾನ ಬಿಡುಗಡೆ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 2010-11 ನೇ ಸಾಲಿನ ಲೆಕ್ಕ ಶೀರ್ಷಿಕೆ 4210-03-105-01-02-386 (ಕಟ್ಟಡಗಳು) ಇದರಡಿ ವಿದ್ಯಾರ್ಥಿ ವಿದ್ಯಾರ್ಥಿನಿಲಯದ ಹಾಸ್ಟೆಲ್‌ಗಳು ಮತ್ತು ವೈದ್ಯರ ವಸತಿಗೃಹಗಳು 7 ಮತ್ತು 8 ಅಂತಸ್ತುಗಳನ್ನು ಹೊಂದಿರುವುದರಿಂದ ವಿದ್ಯುತ್ ವ್ಯತ್ಯಯದ ಸಂದರ್ಭಗಳಲ್ಲಿ ಅನುಕೂಲವಾಗಲು ಡೀಸೆಲ್ ಜನರೇಟರ್ ಸೆಟ್ ಅಳವಡಿಸಲು ಸಂಸ್ಥೆಯ ಮೂರನೇ ಆರ್ಥಿಕ ಸಮಿತಿ ಸಭೆಯ ನಡವಳಿ ಸಂಖ್ಯೆ 17 ಹಾಗೂ 8 ನೇ ಆಡಳಿತ ಮಂಡಳಿ ಸಭೆಯ ಅಜಾಂಡ ಸಂಖ್ಯೆ 02 ರಲ್ಲಿ ನಿಯಮಾನುಸಾರ ಟೆಂಡರ್ ಕರೆದು ಲೋಕೋಪಯೋಗಿ ಇಲಾಖಾವತಿಯಿಂದ ಖರೀದಿಸಲು ರೂ.39.00 ಲಕ್ಷಗಳಿಗೆ ಆಡಳಿತ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿದೆ.<br>ಈ ಸಂಬಂಧ ಟೆಂಡರ್‌ನಲ್ಲಿ ಅನುಮೋದನೆಯಾಗಿರುವ ಮೇ\|\| ಗೀತಾ ಎಂಟರ್ ಪ್ರೈಸಸ್ ಬೆಂಗಳೂರು ಇವರು ಸದರಿ ಕಾಮಗಾರಿ ನಿರ್ವಹಿಸಿದ್ದು ಕಾಮಗಾರಿ ಪೂರ್ಣಗೊಂಡಿರುತ್ತದೆ. ಈ ಬಾಬ್ತು ಸದರಿ ಏಜೆನ್ಸಿಗೆ ಒಂದನೇ ಮತ್ತು ಭಾಗಶ: ಬಿಲ್ಲು ಈಗಾಗಲೇ ಧನಾದೇಶ ಸಂಖ್ಯೆ: 0861054, ದಿನಾಂಕ:11-03-2011ರಲ್ಲಿ ರೂ. 29,29,181-00 ಪಾವತಿಯಾಗಿದ್ದು, ಎರಡನೇ ಮತ್ತು ಅಂತಿಮ ಬಿಲ್ಲು ರೂ.43,854-00 ಪಾವತಿಸಲು ಅನುದಾನ ಬಿಡುಗಡೆ ಬಾಕಿ ಇರುತ್ತದೆ.<br>ಪ್ರಸ್ತಾವಿತ ಕಟ್ಟಡಗಳ ವಿದ್ಯುತ್ ಬಿಲ್‌ನಲ್ಲಿ ಭರಿಸುತ್ತಿರುವ ದಂಡ ಶುಲ್ಕವನ್ನು ತಪ್ಪಿಸುವ ಸಲುವಾಗಿ ಪವರ್ ಫಾಕ್ಟರ್ [ಕೆಪಾಸಿಟಲ್ ಪ್ಯಾನಲ್] ಅಳವಡಿಸುವ ಮತ್ತು ಜನರೇಟರ್ ಶೆಡ್ ನಿರ್ಮಿಸುವ ಸಲುವಾಗಿ ರೂ.9,78,000.00 ಗಳಿಗೆ ಅಂದಾಜು ಪಟ್ಟಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ಒಳನಾಡು ಜಲಸಾರಿಗೆ ವಿದ್ಯುತ್ ಉಪವಿಭಾಗ ಮೈಸೂರು ರವರು ಸಂಸ್ಥೆಗೆ ಸಲ್ಲಿಸಿರುತ್ತಾರೆ. ಮತ್ತು ಸದರಿ ಕಾಮಗಾರಿಯ ಅಂತಿಮ ಬಿಲ್ ರೂ.9,97,682.00 ಮೇಲೆ ಪ್ರಸ್ತಾವಿತವಾದ ಏಜಿನ್ಸಿಯಿಂದ ಮೆ. ಗೀತಾ ಎಂಟರ್ ಪ್ರೈಸಸ್ ರವರು ಸಲ್ಲಿಕೆಯಾಗಿದೆ. ಆದ ಕಾರಣ<br>1) ವಿದ್ಯಾರ್ಥಿ /ವಿದ್ಯಾರ್ಥಿನಿಯರ ಹಾಸ್ಟೆಲ್ ಮತ್ತು ವೈದ್ಯರ ವಸತಿ ಗೃಹಗಳಿಗೆ ಡಿ.ಜಿ.ಸೆಟ್ ಅಳವಡಿಸಲು ಕಾಮಗಾರಿಗೆ ಪಾವತಿಸಲು ಬಾಕಿ ಅನುದಾನ. ರೂ. 43,854-00<br>2) ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಹಾಸ್ಟೆಲ್ ಮತ್ತು ವೈದ್ಯರ ವಸತಿ ಗೃಹಗಳಿಗೆ 250 KVR. P.F ಪ್ಯಾನಲ್ ಬೋರ್ಡ್ ಆಳವಡಿಸಲು ಪಾವತಿಸಬೇಕಾದ ಮೊತ್ತ ರೂ. 9,97,682-00<br>**ಒಟ್ಟು ಮೊತ್ತ ರೂ. 10,41,536-00**<br>4210-03-105-1-02-386ರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆಗಾಗಿ ಒಪ್ಪಿ ಅಂಗೀಕರಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 18<br>18<br>(ಎ) | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.**<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ STP(Sewage Treatment Plant) ಕಾಮಗಾರಿಗೆ ರೂ.245.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಉಳಿಕೆ ಅನುದಾನ ರೂ.115.00 ಲಕ್ಷ ಬಿಡುಗಡೆ ಮಾಡುವ ಬಗ್ಗೆ. | ಉಲ್ಲೇಖ:1) ಹಿಮ್ಸ್/ಟಿ.ಎಸ್./(Inst-Fur)/08-2012-13, ದಿ:06-08-2012./ 2)KUWS&DB ಕಛೇರಿ ಸಂಖ್ಯೆ: ಕಜಮಂ:TEC/HSN/HIMS/EST- 01/DCW/174, ದಿನಾಂಕ: 02-06-2012/3) ಸರ್ಕಾರದ ಆದೇಶ ಸಂಖ್ಯೆ: ಆಕುಕ 11 ಕೆವಿಎಂ 2012, ಬೆಂಗಳೂರು, ದಿನಾಂಕ:31-03-2012. 4.ಕಛೇರಿ ಪತ್ರ ಸಂಖ್ಯೆ:ಹಿಮ್ಸ್/ADM/ KSPCB/38/ 2012-13, ದಿನಾಂಕ:13-06-2012.ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಘನ ತ್ಯಾಜ್ಯ ಶುದ್ಧೀಕರಣ ಘಟಕ STP(Sewage Treatment Plant) ನಿರ್ಮಾಣ ಮಾಡುವ ಕಾಮಗಾರಿಗೆ ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಹಾಸನರವರು ಈ ಹಿಂದೆ ಉಲ್ಲೇಖ(1)ರಲ್ಲಿ ಸಲ್ಲಿಸಿದ್ದ ರೂ. 193.00 ಲಕ್ಷಗಳ ಅಂದಾಜು ಮೊತ್ತಕ್ಕೆ ರೂ. 245.00 ಲಕ್ಷ ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಸಿರುತ್ತಾರೆ ಮತ್ತು ಸದರಿ ಮೊತ್ತ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಉಲ್ಲೇಖಿಸಿರುತ್ತಾರೆ.<br>ಆದ್ದರಿಂದ ಈ ಹಿನ್ನಲೆಯಲ್ಲಿ ಈ ಹಿಂದೆ ಉಲ್ಲೇಖಿತ ಪತ್ರದನ್ವಯ ನೀಡಿದ್ದ ರೂ. 193.00 ಲಕ್ಷಗಳ ಆಡಳಿತಾತ್ಮಕ ಅನುಮೋದನೆಯನ್ನು ರದ್ದುಗೊಳಿಸಿ/ವಿಸ್ತರಿಸಿ ರೂ. 245.00 ಲಕ್ಷಗಳಿಗೆ ನೀಡಲು ಕೋರಿದೆ. ಅಲ್ಲದೇ ಉಲ್ಲೇಖಿತ ಪತ್ರ(3) ರನ್ವಯ ಬಿಡುಗಡೆಯಾಗಿರುವ ರೂ. 130.00 ಲಕ್ಷಗಳನ್ನು ಈಗಾಗಲೇ ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಹಾಸನರವರು ಈ ಹಿಂದೆ ಉಲ್ಲೇಖ(4) ದಿನಾಂಕ:13-06-2012 ರಲ್ಲಿ ಡೆಪಾಸಿಟ್ ಮಾಡಲಾಗಿದೆ (ಡಿ.ಡಿ. ನಂ. 450775, ರೂ. 130.00 ಲಕ್ಷಗಳು).<br>ಆದ್ದರಿಂದ ಪರಿಷ್ಕೃತ ಅಂದಾಜು ಮೊತ್ತದ ಬಾಬ್ತನ್ನು ರೂ. 245.00 ಲಕ್ಷದಲ್ಲಿ ಈಗಾಗಲೇ ಬಿಡುಗಡೆ ಮಾಡಿರುವ ರೂ. 130.00 ಲಕ್ಷಗಳನ್ನು ಕಳೆದು ಉಳಿಕೆ ಮೊತ್ತ ರೂ. 115.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 4210-03-105-01-02-386 (ಯೋಜನೆ) ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದರ ಬಗ್ಗೆ ಚರ್ಚಿಸಲಾಯಿತು. ಈಗಾಗಲೇ ರೂ.130.00ಗಳನ್ನು ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಹಾಸನರವರು ಇವರಿಗೆ ಡೆಪಾಸಿಟ್ ಮಾಡಿದ್ದರು ಸಹ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ. ಕೂಡಲೇ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುವುದೆಂದು ಮತ್ತು ಸರ್ಕಾರಕ್ಕೆ ರೂ.193.00 ಲಕ್ಷರೂಗಳ ಬದಲಿಗೆ 245.00 ಲಕ್ಷರೂಗಳಿಗೆ ಆಡಳಿತ ಮಂಜೂರಾತಿ ಮತ್ತು ಬಾಕಿ ರೂ.115-00ಲಕ್ಷ ಅನುದಾನ ಬಿಡುಗಡೆಗೆ ಮಾಡಲು ಪತ್ರ ಬರೆಯಲು ತೀರ್ಮಾನಿಸಲಾಯಿತು. |
| 18<br>(ಬಿ) | ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವ್ಯಾಪ್ತಿಯಲ್ಲಿ ವಿಕಿರಣ ಚಿಕಿತ್ಸಾ ಘಟಕವನ್ನು | ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ ತೆರೆಯಲಿರುವ ಕ್ಯಾನ್ಸರ್ ವಿಕಿರಣ ಚಿಕಿತ್ಸಾ ಘಟಕದ ನಿರ್ವಹಣೆಯ ಸಾರ್ವಜನಿಕ ಸಹಭಾಗಿತ್ವದ ವಿಧಾನದಲ್ಲಿ ಅವಶ್ಯಕ ತಂತ್ರಜ್ಞರನ್ನು ಒದಗಿಸಿ ಚಿಕಿತ್ಸಾ ನಿರ್ವಹಣೆ ಮಾಡುವ ಕಾರ್ಯವನ್ನು ಹೆಲ್ತ್ ಕೇರ್ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಸ್ಥಾಪಿಸಲು ಎಲ್ಲಾ ಮೂಲಭೂತ ಸೌಕರ್ಯಗಳ ವ್ಯವಸ್ಥೆಯಾಗಿದ್ದು, ಅದನ್ನು ಚಾಲನೆಯಲ್ಲಿಡಲು ಅಗತ್ಯವಾದ ತಂತ್ರಜ್ಞರ ಸೇವೆಯನ್ನು ಒದಗಿಸಲು ಟೆಂಡರ್ ಪ್ರಕ್ರಿಯೆ ಸರ್ಕಾರದಿಂದ ಅನುಮೋದನೆಯಾಗಿರುವ ಬಗ್ಗೆ. | ಗ್ಲೋಬಲ್ ಸಂಸ್ಥೆಯವರಿಗೆ (HCG)ವಹಿಸುವುದು ಮತ್ತು ಅವರೊಂದಿಗೆ ಈ ಸಂಬಂಧ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಒಪ್ಪಂದ ಪತ್ರನವನ್ನು ಈ ಸಂಸ್ಥೆಯ ಸ್ಥಳೀಯ ವಕೀಲರಿಂದ ಅಭಿಪ್ರಾಯ ಪಡೆದು ಕೊಳ್ಳಲಾಗಿದೆ. ವಕೀಲರ ಅಭಿಪ್ರಾಯದ ಪ್ರಕಾರ ತಯಾರಿಸಿದ ಒಪ್ಪಂದ ಪತ್ರವನ್ನು ಅನುಮೋದಿಸಿ HCGಯೊಂದಿಗೆ ಕರಾರು ಮಾಡಿ ಕೊಳ್ಳುವುದರ ಬಗ್ಗೆ ಚರ್ಚಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವುದೆಂದು ಮತ್ತು ರೆಫರಲ್ ಕೇಸುಗಳಿಗೆ ಈ ಸಂಸ್ಥೆಯ ದರದಲ್ಲಿಯೇ ಚಿಕಿತ್ಸೆ ಸೌಲಭ್ಯ ಕ್ರಮ ಕೈಗೊಳ್ಳುವುದಕ್ಕೆ ಒಪ್ಪಿ ತೀರ್ಮಾನಿಸಲಾಯಿತು. |
| 18 (ಸಿ) | ಸಂಸ್ಥೆಯ ಬೋಧನ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯ ನೂತನ ಕಟ್ಟಡಕ್ಕೆ ಅಗತ್ಯವಿರುವ ಉಪಕರಣ ಗಳು ಪೀಠೋಪಕರಣಗಳು ಮತ್ತು ಇತರೆ ಸಾಮಗ್ರಿ ಗಳ ಖರೀದಿಯ ಅಂದಾಜು ಮೊತ್ತ ರೂ.3,000-00 ಲಕ್ಷಗಳ ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾಗಳ ಸಂಸ್ಥೆಯ ಬೋಧನ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯ ನೂತನ ಕಟ್ಟಡ ಕಾಮಗಾರಿಯ ಮುಗಿಯುವ ಹಂತದಲ್ಲಿರುತ್ತದೆ. ಈ ನೂತನ ಆಸ್ಪತ್ರೆಗೆ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ವಿಭಾಗವಾರು ಅವಶ್ಯಕವಿರುವ ಉಪಕರಣಗಳು, ಪೀಠೋಪಕರಣಗಳು, ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸುವುದರೊಂದಿಗೆ ಆಸ್ಪತ್ರೆಗೆ ಬರುವ ಸಾರ್ವಜನಿಕ ರೋಗಿಗಳಿಗೆ ಉತ್ತಮ ಚಿಕಿತ್ಸೆಗಳನ್ನು ನೀಡಲು ಅನುಕೂಲ ವಾಗುವಂತೆ ಅತ್ಯಾಧುನಿಕ ಉಪಕರಣಗಳನ್ನು ಖರೀದಿಸಬೇಕಾಗಿರುತ್ತದೆ. ಈ ಸಂಬಂಧ ಸಂಸ್ಥೆಯಿಂದ ಒಂದು ಸಮಿತಿಯನ್ನು ರಚನೆ ಮಾಡಿದ್ದು, ಸದರಿ ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರುಗಳೊಂದಿಗೆ, ಸಮಾಲೋಚಿಸಿ ಅಗತ್ಯವಿರುವ ಉಪಕರಣ ಗಳು ಮತ್ತು ಪೀಠೋಪಕರಣಗಳು, ಮತ್ತು ಇತರೆ ಸಾಮಗ್ರಿಗಳ ವಿವರವನ್ನು Specification ನೊಂದಿಗೆ ವರದಿ ನೀಡಿರುತ್ತಾರೆ. ಈ ಖರೀದಿಗೆ ಅಂದಾಜು 3,000-00 ಲಕ್ಷ ರೂ. ಅನುದಾನ ಅವಶ್ಯಕತೆ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಮೇಲ್ಕಂಡ ಉಲ್ಲೇಖದನ್ವಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸದರಿ ವಿಷಯದ ಬಗ್ಗೆ ಚರ್ಚೆ ಮತ್ತು ಅನುದಾನ ಬಿಡುಗಡೆ ಬಗ್ಗೆ ಹಾಗೂ ಈ ಪ್ರಕ್ರಿಯೆಯನ್ನು E-Tender ಮೂಲಕ ಪ್ರಾರಂಭಿಸುವ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ಕಟ್ಟಡದ ಕಾಮಗಾರಿಯು ಪೂರ್ಣಗೊಂಡ ನಂತರ ಕ್ರಮ ಕೈಗೊಳ್ಳಲುತೀರ್ಮಾನಿಸಲಾಯಿತು. |
| 18 (ಡಿ) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 3ನೇ ಹಂತದ ಕಟ್ಟಡ ಕಾಮಗಾರಿಗಳ ಅಂದಾಜು ಮೊತ್ತ ರೂ.3,500.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅಗತ್ಯವಿರುವ ಅನುದಾನ | 3ನೇ ಹಂತದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸ್ನಾತಕೋತ್ತರ ವಿದ್ಯಾರ್ಥಿಗಳ ವಸತಿ ಗೃಹ, ದಾದಿಯರ ವಸತಿಗೃಹ, ಆಡಿಟೋರಿಯಂ, ರೆಸಿಡೆಂಟ್ಸ್ ವಸತಿ ಗೃಹಗಳು ಹಾಗೂ ಇತರೆ ಕಾಮಗಾರಿಗಳು ಅತ್ಯಗತ್ಯವಾಗಿ ನಿರ್ಮಾಣವಾಗಬೇಕಾಗಿ ರುತ್ತದೆ. ಈ ಕಾಮಗಾರಿಗಳು ಪ್ರಾರಂಭವಾಗದೇ ಇದ್ದಲ್ಲಿ ಈ ಸಂಸ್ಥೆಗೆ ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ದೊರೆತಿರುವ ಮಾನ್ಯತೆಯನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ ಎಂಬ ವಿಷಯವನ್ನು ಅತಿ ತುರ್ತೆಂದು ಪರಿಗಣಿಸಿ, ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ಅಗತ್ಯವಿರುವ ಅನುದಾನವನ್ನು 4210-03-105-01-02-386 (ಯೋಜನೆ) ಲೆಕ್ಕ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಬಿಡುಗಡೆ ಮಾಡುವ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ. | ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡುವುದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಪತ್ರ ಬರೆದಿರುವ ಬಗ್ಗೆ ಚರ್ಚಿಸಲಾಯಿತು. ಇದರ ಬಗ್ಗೆ ಸರ್ಕಾರದ ಹಂತದಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡಲು ಒಪ್ಪಿ ತೀರ್ಮಾನಿಸಲಾಯಿತು. |
| 18 (ಇ) | ರೂ.6,66,00,000-00 ಟೆಂಡರ್ ಪ್ರಕ್ರಿಯೆಯ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಎಮ್.ಸಿ.ಐ. ನಿಂದ ಸ್ನಾತಕ ಪ್ರವೇಶಾವಕಾಶವನ್ನು ದೊರಕಿಸಿಕೊಳ್ಳಲು ಅತ್ಯಗತ್ಯವಾದ ಮತ್ತು ರೋಗಿಗಳ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಒಟ್ಟು 05 ವಿಭಾಗಗಳಿಗೆ ರೂ.6.66 ಕೋಟಿ ಮೊತ್ತದಲ್ಲಿ ವಿವಿಧ ರೀತಿಯಲ್ಲಿ 80 ಸಂಖ್ಯೆಯ ಉಪಕರಣಗಳನ್ನು 2011-12ನೇ ಸಾಲಿಗೆ ಖರೀದಿಸಲು ಸಂಸ್ಥೆಯ ದಿನಾಂಕ: 22-02-2011 ರಂದು ನಡೆದ 5ನೇ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿತ್ತು. ಆರ್ಥಿಕ ಸಮಿತಿ ಸಭೆಯ ಅನುಮತಿಯಂತೆ ಸದರಿ ಉಪಕರಣಗಳನ್ನು ಖರೀದಿಸಲು ಒಟ್ಟು ಒಟ್ಟು 05-Scheduleಗಳಲ್ಲಿ ನಿಯಮಾನುಸಾರ KTPP ACT-2000ದ ಅಧಿನಿಯಮದಂತೆ ಟೆಂಡರ್ ಕರೆಯಲಾಗಿತ್ತು. ಟೆಂಡರ್ ನಿಯಮದಂತೆ ನಿಯಮಾನುಸಾರ ಟೆಂಡರ್ ತೆರೆಯುವುದು, ಟೆಂಡರ್ Techno Commercial Bid ಮೌಲ್ಯಮಾಪನ ಮಾಡುವುದು, ಅರ್ಹರಾದ ಟೆಂಡರ್‌ದಾರರನ್ನು ಪ್ರಾತ್ಯಕ್ಷತೆಗೆ (Demonstration)ಗೆ ಆಹ್ವಾನಿಸುವುದು, ಪ್ರಾತ್ಯಕ್ಷತೆಯಲ್ಲಿ ಅರ್ಹರಾದ ಟೆಂಡರ್ ದಾರರ Price Bidnfnu ತೆರೆಯುವುದು ನಿಯಮಾನುಸಾರ Negotiation ಮಾಡಿ ನಂತರ ಅಂಗೀಕರಿಸಬಹುದಾದಂತಹ ಟೆಂಡರ್‌ದಾರರ ಉಪಕರಣಗಳು ಮತ್ತು ದರವನ್ನು ಸಂಸ್ಥೆಯ ಖರೀದಿ ಸಮಿತಿಯ(Purchase Committee)ಯ ಅನುಮೋದನೆಗೆ ಸಲ್ಲಿಸಲಾಗಿತ್ತು. ಈ ಪ್ರಕ್ರಿಯೆ ಮೇ - 2012ಕ್ಕೆ ಒಂದುವರ್ಷ ತುಂಬಿರುವುದರ ಬಗ್ಗೆ ಚರ್ಚಿಸಲಾಯಿತು. ನಿಯಮಾನುಸಾರ ಅವಧಿ ಮುಗಿದಿರುವುದರಿಂದ ಈ ಟೆಂಡರ್ ಅನ್ನು ರದ್ದು ಪಡಿಸುವುದೆಂದು ತೀರ್ಮಾನಿಸಲಾಯಿತು. |
| 18 (ಎಫ್) | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಕ್ಷ-ಕಿರಣ ವಿಭಾಗದಲ್ಲಿರುವ ಹಳೆಯ ಕ್ಷ-ಕಿರಣ ಯಂತ್ರಗಳನ್ನು ಬೈ-ಬ್ಯಾಕ್ ಮಾದರಿಯಲ್ಲಿ ಹಿಂದಿರುಗಿಸಿ ಹೊಸ ಕ್ಷ-ಕಿರಣ ಯಂತ್ರವನ್ನು ಖರೀದಿಸುವ ಬಗ್ಗೆ ಚರ್ಚೆ. | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಕ್ಷ-ಕಿರಣ ವಿಭಾಗದಲ್ಲಿ ಈ ಕೆಳಕಂಡ ಕ್ಷ-ಕಿರಣ ಯಂತ್ರ 1) SRS-300MA ದಿನಾಂಕ: 08-09-1986, 2) DX300MA ,ದಿನಾಂಕ: 05-03-1984 3) Pleophos-D-300MA 1999ರ ಸಾಲಿನಲ್ಲಿ ಖರೀದಿಸಲಾಗಿದ್ದು ಈ ಯಂತ್ರಗಳು ದುರಸ್ಥಿ ಮಾಡಿಸಲು ಅಂದಾಜು ರೂ.2.00 ಲಕ್ಷಗಳು ಆಗುವುದರಿಂದ ಹಾಗೂ ಈ ಯಂತ್ರಗಳು ಮುಂದಿನ ದಿನಗಳಲ್ಲಿ ಉಪಯೋಗ ಖಾತರಿ ಇರುವುದಿಲ್ಲ. ಇವುಗಳ ಬದಲಾಗಿ By-Back ಕ್ಷ-ಕಿರಣ ಯಂತ್ರ ಖರೀದಿಸಲು ಒಪ್ಪಿ ತೀರ್ಮಾನಿಸಲಾಯಿತು. |
| 18(ಜಿ) | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಕೆಲವು ಭಾಗಗಳನ್ನು Demolish ಮಾಡಿ ನವೀಕರಿಸುವ ಬಗ್ಗೆ. | ಈ ಹಿಂದಿನ ಆಡಳಿತ ಮಂಡಳಿಯ ಸಭೆಯ ದಿನಾಂಕ:28-08-2010ರಲ್ಲಿ ಸಭೆಯ ನಡವಳಿಯಂತೆ ಕ್ರಮ ವಹಿಸಲು ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 18 (ಹೆಚ್) | 29 ನೌಕರರ ಬಗ್ಗೆ. | ಸಂಸ್ಥೆಯ ಬೋಧಕೇತರ ಸಿಬ್ಬಂದಿಯ ನೇಮಕಾತಿಯ ಬಗ್ಗೆ ರಾಜ್ಯ ಉಚ್ಛನ್ಯಾಯಾಲಯದಲ್ಲಿ ವ್ಯಾಜ್ಯ ಬಾಕಿ ಇರುವುದರಿಂದ ಈ ವಿಷಯದಲ್ಲಿ ಚರ್ಚಿಸುವುದನ್ನು ಕೈಬಿಡಲಾಗಿದೆ. |
| 18 (ಐ) | ಡಾ. ರಾಘವೇಂದ್ರರಾವ್ .ಆರ್. ಸಹಾಯಕ ಪ್ರಾಧ್ಯಾಪಕರು, ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗ ಇವರು ರಾಜೀನಾಮೆ ಸಲ್ಲಿಸಿದ್ದು, ಅನುಮೋದನೆಗಾಗಿ ಆಡಳಿತ ಮಂಡಳಿ ಮುಂದೆ ಮಂಡಿಸಿದೆ. | ಡಾ. ರಾಘವೇಂದ್ರರಾವ್ .ಆರ್. ಸಹಾಯಕ ಪ್ರಾಧ್ಯಾಪಕರು, ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗ ಇವರು ರಾಜೀನಾಮೆ ಸಲ್ಲಿಸಿದ್ದು ಸದರಿಯವ ರಾಜೀನಾಮೆಯನ್ನು ಒಪ್ಪಿ ಅಂಗೀಕರಿಸಲಾಯಿತು. |

29.08.12

ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆಡಳಿತ ಮಂಡಳಿ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ ಹಾಗೂ
ಉಪಾಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.